## ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.

## ಸಿ.ಸಿ.ನಂ.49/2023

| | | | |
|---|---|---|---|
| ಸಾಕ್ಷಿದಾರರ ಹೆಸರು | ರಾಮಣ್ಣ ಬಸಾಪುರ | ಸಿಡಬ್ಲ್ಯೂ | 11 |
| ತಂದೆ ಹೆಸರು | ಬಸವಣ್ಣೆಪ್ಪ | ಪಿಡಬ್ಲ್ಯೂ | 8 |
| ವಯಸ್ಸು | 59 ವರ್ಷ | | |
| ಉದ್ಯೋಗ | ಕೃಷಿ | | |
| ವಾಸಸ್ಥಳ | ದೇವಗಿರಿ ತಾಃಜಿಃ ಹಾವೇರಿ | | |

**ದಿಃ 14.01.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃಹಿ.ಸ.ಸ.ಅಭಿಯೋಜಕರಿಂದ.**

1). ನನಗೆ ಚಾ.ಸಾ-1,9,10 ಮತ್ತು 12 ಇವರ ಪರಿಚಯ ಇರುತ್ತದೆ. ಚಾ.ಸಾ-10 ಈಗ ಮರಣ ಹೊಂದಿರುತ್ತಾರೆ. ಪೀರಸಾಬ ಈತನಿಗೆ 4 ಜನ ಹೆಣ್ಣುಮಕ್ಕಳು ಮತ್ತು ಜಿಲಾನಿ ಈತ ಒಬ್ಬ ಗಂಡು ಮಗನಿದ್ದನು. ಅಪಘಾತವು 2-3 ವರ್ಷಗಳ ಹಿಂದೆ ಆಗಿರುತ್ತದೆ. ನಮ್ಮ ಗ್ರಾಮದ ದ್ಯಾಮವ್ವನ ಗುಡಿಕಟ್ಟೆಯ ಮೇಲೆ ಅಪಘಾತವಾಗುವ ಪೂರ್ವದಲ್ಲಿ ಒಟ್ಟು 10 ರಿಂದ 12 ಜನ ಮಾತನಾಡುತ್ತಾ ಕುಳಿತುಕೊಂಡಿದ್ದೇವು. ಜಿಲಾನಿ ಈತನು ರಸ್ತೆಯ ಎಡಪಕ್ಕದಲ್ಲಿ ಹೊರಟಾಗ ಆತನ ವಾಹನದಿಂದ ಕಟಮಾ ವಾಹನದ ಚಾಲಕನು ಅತೀ ವೇಗದಿಂದ ಮತ್ತು ನಿರ್ಲಕ್ಷತನದಿಂದ ಚಾಲನೆ ಮಾಡಿಕೊಂಡು ಬಂದು ಜಿಲಾನಿ ಈತನಿಗೆ ಡಿಕ್ಕಿಪಡಿಸಿ ನಂತರ ತನ್ನ ಕಟಮಾ ವಾಹನದ ಅಡಿ ಜಿಲಾನಿಯನ್ನು ಸಿಗಿಸಿಕೊಂಡು 60 ಪೂಟ ಮುಂದೆ ಹೋಗಿ ತನ್ನ ಕಟಮಾ ವಾಹನವನ್ನು ನಿಲ್ಲಿಸಿರುತ್ತಾನೆ. ನಂತರ ಕಟಮಾ ವಾಹನವನ್ನು ಅಲ್ಲಿ ಸೇರಿದ ಜನರು ಮುಂದಕ್ಕೆ ಹೋಗಿ ನಿಲ್ಲಿಸಿರುತ್ತಾರೆ. ಅಪಘಾತದಲ್ಲಿ ಜಿಲಾನಿ ಈತನಿಗೆ ಆದಂತಹ ಗಾಯಗಳಿಂದ ಆತನು ಪ್ರಜ್ಞಾಹೀನ ಸ್ಥಿತಿಯಲ್ಲಿದ್ದನು. ನಂತರ ಜಿಲಾನಿ ಈತನನ್ನು ಹಾವೇರಿಯ ಜಿಲ್ಲಾ ಆಸ್ಪತ್ರೆಗೆ ಸಾಗಿಸಲಾಗಿರುತ್ತದೆ . ಆ ಬಳಿಕ ಜಿಲಾನಿ ಈತನಿಗೆ ಹೆಚ್ಚಿನ ಚಿಕಿತ್ಸೆಗೆ ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಯಲ್ಲಿ ಸಾಗಿಸಲಾಗಿರುತ್ತದೆ. ನಂತರ

ಜಿಲಾನಿ ಈತನು ಹುಬ್ಬಳಿಳಯ ಕಿಮ್ಸ ಆಸ್ಪತ್ರೆಯಲ್ಲಿ ಸಾಯಂಕಾಲ 7-00 ಘಂಟೆ ಅಗಿರುತ್ತದೆ. ಕಟಮಾ ವಾಹನದ ಚಾಲಕನ ಹೆಸರು ಮಾಲತೇಶ ಸುಣಗಾರ ಅಂತಾ ಇರುತ್ತದೆ . ಸದರಿ ಕಟಮಾ ವಾಹನದ ಚಾಲಕನು ಈ ದಿವಸ ನ್ಯಾಯಾಲಯದ ಮುಂದೆ ಇರುತ್ತಾನೆ . ಆತನು ಈ ಪ್ರಕರಣದಲ್ಲಿ 1 ನೇ ಆರೋಪಿ ಇರುತ್ತಾನೆ. ಮಾಲತೇಶ ಈತನು ನಡೆಸುತ್ತಿದ್ದ ಕಟಮಾ ವಾಹನದ ನೊಂದಣಿ ಸಂಖ್ಯೆ ಹೇಳಲು ಆಗುವದಿಲ್ಲ. ಕಟಮಾ ವಾಹನದ ಪೋಟೋ ನೋಡಿದರೆ ಗುರುತಿಸಬಲ್ಲೆ. ನಿ.ಪಿ-10 ಮತ್ತು 11 ರಲ್ಲಿ ಕಾಣಿಸಿದಂತಹ ಕಟಮಾ ವಾಹನದಿಂದ ಜಿಲಾನಿ ಈತನಿಗೆ 1 ನೇ ಆರೋಪಿ ಡಿಕ್ಕಿಪಡಿಸಿ ಅಪಘಾತಪಡಿಸಿರುತಾತನೆ.

**ಪಾಟೀ ಸವಾಲುಃ ಶ್ರೀ.ಜೆ.ಬಿ.ಕೆ ವಕೀಲರಿಂದಃ 1 ನೇ ಆರೋಪಿ ಪರವಾಗಿಃ**

2) ಈ ಪ್ರಕರಣದಲ್ಲಿ ಅದಂತಹ ಅಪಘಾತಕ್ಕೆ ಸಂಬಂದಪಟ್ಟಂತೆ ನಾನು ಪೊಲೀಸರ ಸಮಕ್ಷಮ ಯಾವುದೇ ಹೇಳಿಕೆ ಕೊಟ್ಟಿರುವದಿಲ್ಲ. ಅದೇ ರೀತಿ ಪ್ರಕರಣದಲ್ಲಿ ಹೇಳಿದಂತಹ ಅಪಘಾತವು ಯಾವ ದಿನಾಂಕ, ತಿಂಗಳು ಮತ್ತು ವರ್ಷದಂದು ಆಗಿರುತ್ತದೆ ಎಂದು ನನಗೆ ಗೊತ್ತಿರುವದಿಲ್ಲ. 1 ನೇ ಆರೋಪಿಯ ತಪ್ಪು ಚಾಲನೆಯಿಂದ ಜಿಲಾನಿ ಈತನಿಗೆ ಅಪಘಾತ ಆಗಿಲ್ಲ ಅಂದರೆ ಸರಿಯಲ್ಲ, ನಾನು ಜಿಲಾನಿ ಈತನ ಕುಟುಂಬಕ್ಕೆ ಪರಿಹಾರ ಕೊಡಿಸಲು ಆರೋಪಿಯ ವಿರುದ್ದ ಸುಳ್ಳು ಸಾಕ್ಷಿ ಹೇಳುತಿತದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.